ಅಶ್ವತ್ಥಾಮನು ದುರ್ಯೋಧನನ ಆ ಸ್ಥಿತಿಯನ್ನು ಕಂಡು ಕೋಪದಿಂದ, ನಿನ್ನ ಈ ಸ್ಥಿತಿಗೆ ಕಾರಣರಾದ ಪಾಂಡವರ ತಲೆಗಳನ್ನು ಇಗೋ ಈಗಲೇ ತರುತ್ತೇನೆ ಎಂದು ಹೊರಟು, ಉಪ ಪಾಂಡವರರನ್ನು ಕೊಂದು, ಅವರ ತಲೆಗಳನ್ನು ದುರ್ಯೋಧನನ ಮುಂದಿಡುತ್ತಾನೆ. ಆಗ ದುರ್ಯೋಧನ:

ಬಾಲಕಮಳಂಗಳಂ ಕಮ
ಳಾಲಯದಿಂ ತಿರಿದು ತರ್ಪುವೊಲ್ ತಂದೈ ನೀಂ
ಬಾಲಕರ ತಲೆಗಳಕ್ಕಟ

'ತಾವರೆ ಮೊಗ್ಗುಗಳನ್ನು ತಾವರೆಕೊಳದಿಂದ ತರಿದು ತರುವಂತೆ ನೀನು ಬಾಲಕರ ತಲೆಗಳನ್ನು ತಂದೆಯಲ್ಲ, ಅಯ್ಯೋ...' ಎಂದು ತನ್ನ ದುರಂತ ಸ್ಥಿತಿಯಲ್ಲೂ ಮಕ್ಕಳ ಹತ್ಯೆಗೆ ಮರುಗುತ್ತಾನೆ. ಅವನ ಮನಸ್ಸು ಅಶ್ವತ್ಥಾಮನ ಕೃತ್ಯವನ್ನು ಖಂಡಿಸುತ್ತದೆ.

ಕುರುಕ್ಷೇತ್ರ ಯುದ್ಧಕ್ಕೆ ಹೊರಟ ಅರ್ಜುನ 'ತನ್ನವರೇ ಆದ ಬಂಧುಗಳ' ಹೇಗೆ ಕೊಲ್ಲಲಿ ಎಂದು ಹಿಂಜರಿಯುತ್ತಾನೆ. ಭೀಷ್ಮನಂತೂ 'ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತಾದೆ' ಎಂದು ಬೇಯುತ್ತಾನೆ. 'ಆದಿಪುರಾಣ'ದಲ್ಲಿ ಮಂತ್ರಿಗಳು ಅಣ್ಣತಮ್ಮಂದಿರ ನಡುವಿನ ಪ್ರತಿಷ್ಠೆಯ ಯುದ್ಧಕ್ಕೆ ಲಕ್ಷಾಂತರ ಪ್ರಾಣಗಳ ಬಲಿ ಬೇಡ ಎಂದು ನಿರ್ಧರಿಸುತ್ತಾರೆ; ಸೈನ್ಯಗಳ ನಡುವಣ ಯುದ್ಧವನ್ನು ತಪ್ಪಿಸಿ, ಭರತ–ಬಾಹುಬಲಿಯರ ನಡುವೆ ಧರ್ಮಯುದ್ಧಕ್ಕೆ ಅನುವು ಮಾಡಿಕೊಡುತ್ತಾರೆ. ಇವೆಲ್ಲವೂ ಹಿಂದೆ–ಯುದ್ಧದ ನಿರರ್ಥಕತೆಯ ಬಗೆಗಿನ ಪಂಪನ ಹೇಳಿಕೆಗಳೇ ಆಗಿವೆ.

ಒಮ್ಮೆ ಅಶ್ವತ್ಥಾಮ, ಕರ್ಣನನ್ನು ಹೀಯಾಳಿಸಿ ನುಡಿದಾಗ, ಗುರುಪುತ್ರನನ್ನು ಕೊಲ್ಲುತ್ತೇನೆ ಎಂದು ದುರ್ಯೋಧನ ಸಿಟ್ಟಿಗೇಳುತ್ತಾನೆ.

ನಿನ್ನಿಂದಂ ತ್ರಿಭುವನ ರಾಜ್ಯೋನ್ನತಿ
ಬಂದೆನಗೆ ಸಾರ್ಗುಮಪ್ಪೊಡಮ್ ಒಲ್ಲೆಂ
ನೀನುಡಿದು ಬರ್ದುಕಿದ್ಯೆ ಪೆರ
ರೆನ್ನದಿರೊಳ್ ನುಡಿದು ಕರ್ಣನಂ ಬರ್ದುಕುವರೇ



'ಪಂಪಭಾರತ' ನಾಟಕ ಪ್ರಯೋಗದ ಒಂದು ದೃಶ್ಯ